# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸ.ಕಾ.ನಿ.ಅ/ಶ್ರೀರಾಮ/ಪಿಆರ್/ /22-23

ನೋಡಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು,
ಪ್ರಕಾಶನಗರ, ವಾರ್ಡ್ ಮಟ್ಟದ ಸಮಿತಿ
ಪ್ರಕಾಶನಗರ, ವಾರ್ಡ್ ಸಂ.140
ಬೆಂಗಳೂರು, ದಿನಾಂಕ: 21/12/2022

**ದಿನಾಂಕ: 17/12/2022 ರಂದು ಬೆಳಗ್ಗೆ 11.30 ಗಂಟೆಗೆ ನಡೆದ ಸಭಾ ನಡವಳಿಗಳು:**

**ಸಭೆಯಲ್ಲಿ ಹಾಜರಿದ್ದವರು.**

**ಸಭೆಗೆ ಹಾಜರಿದ್ದ ವಾರ್ಡ್ ಕಮಿಟಿ ಅಧಿಕಾರಿ/ಸದಸ್ಯರು :**

1. ಶ್ರೀ ಕೆ.ಪಿ ಯೋಗೇಶ್ ಸ.ಕಾ.ನಿ.ಅ ಹಾಗೂ ನೋಡೆಲ್ ಅಧಿಕಾರಿ
2. ಕುಮಾರಿ॥ ಹಿತೈಷಿಣಿ.ಎಸ್ ಸಹಾಯಕ ಅಭಿಯಂತರರು
3. ಶ್ರೀ ಲಕ್ಷ್ಮೀನಾರಾಯಣ.ಆರ್ ಬಿ.ಜೆ.ಪಿ
4. ಶ್ರೀ ವಸಂತ್‌ಕುಮಾರ್ ಬಿ.ಜೆ.ಪಿ
5. ಶ್ರೀ ಜಿ ದಿನೇಶ್ ಕುಮಾರ್ ಎಎಪಿ
6. ಶ್ರೀ ಎಸ್.ಮರಿಬಸವರಾಜ್ ಬಿ.ಜೆ.ಪಿ
7. ಶ್ರೀ. ಎಂ.ಷಣ್ಮುಗಂ ಸದಸ್ಯರು / ಸಾರ್ವಜನಿಕರು
8. ಶ್ರೀ. ಯೋಗೆಶ್ ಸದಸ್ಯರು / ಸಾರ್ವಜನಿಕರು
9. ಶ್ರೀ ತೋಪೆಗೌಡ ಕಂದಾಯ ಅಧಿಕಾರಿ
10. ಶ್ರೀ ವಿಜಯಕುಮಾರ್ ಮಾರ್ಷಲ್
11. ಶ್ರೀ ರವಣಯ್ಯ ಕಿರಿಯ ಆರೋಗ್ಯ ಪರಿವೀಕ್ಷಕರು.
12. ಶ್ರೀ. ವಿನೋಜ್‌ಕ. ಎಸ್.ಕೆ ಸದಸ್ಯರು / ಸಾರ್ವಜನಿಕರು
13. ಶ್ರೀ ಷಾಹೀಲ್ ಅಹ್ಮದ್ ಸದಸ್ಯರು / ಸಾರ್ವಜನಿಕರು
14. ಶ್ರೀ ಗಜೇಂಸದ್ರ ಬಿ.ಜೆ.ಪಿ
15. ಶ್ರೀ ಹನುಮಂತ್ ರಾವ್ ಬಿ.ಜೆ.ಪಿ
16. ಶ್ರೀ ಕಾರ್ತಿಕ್ ಎಎಪಿ

ಸಹಾಯಕ ಅಭಿಯಂತರರು ಕಾರ್ಯದರ್ಶಿ ಮತ್ತು ಸಂಚಾಲಕರು, ಸ.ಅ, ವಾರ್ಡ್ ಸಂ.140 (ಹಳೆ ನಂ.98) ವಾರ್ಡ್ ಸಮಿತಿಯ ಅಧ್ಯಕ್ಷರು ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಸ್ವಾಗತವನ್ನು ಕೋರುತ್ತಾ ಸಭೆಯನ್ನು ಪ್ರಾರಂಭಿಸಲು ತಿಳಿಸಿದರು. ಸಭೆಯಲ್ಲಿ ಹಾಜರಿದ ಸದಸ್ಯರು ಹಾಗು ಪಾಲಿಕೆಯ ಅಧಿಕಾರಿಗಳು ತಮ್ಮ ಪರಿಚಯ ನೀಡಿ ಸಭೆಯನ್ನು ಪ್ರಾರಂಭಿಸಲಾಯಿತ್ತು.

1. ವಾರ್ಡ್ ವ್ಯಾಪ್ತಿಯಲ್ಲಿ ಬರುವ ರಾಘವೇಂದ್ರ ಮಠದ ಎದಿರು ಇರುವ ಮರದ ರೆಂಬೆ, ಕೊಂಬೆಗಳನ್ನು ಕತ್ತರಿಸಲು ಸಾರ್ವಜನಿಕರು ಸಭೆಗೆ ತಿಳಿಸಿದಾಗ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಅರಣ್ಯ ಇಲಾಖೆಯವರಿಗೆ ಸೂಕ್ತ ಕ್ರಮವಹಿಸಲು ನಿರ್ದೇಶನ ನೀಡಿದರು.
2. ವಾರ್ಡ್ ವ್ಯಾಪ್ತಿಯಲ್ಲಿ ಬರುವ #1026, 10ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆ ಇವರ ಮನೆಯ ಎದಿರು ಅಡಿಪಾಯದ ದಿಂಡ್ಡನ್ನು Jio cable ರವರು ಅಗೆದಿರುತ್ತಾರೆ. ಅದನ್ನು ಸರಿಪಡಿಸಿಕೊಡಲು ಸದಸ್ಯರೊಬ್ಬರು ಸಭೆಗೆ ತಿಳಿಸಿದಾಗ ನೋಡಲ್ ಅಧಿಕಾರಿಗಳು ಸಾರ್ವಜನಿಕರಿಗೆ ತೊಂದರೆಯಾಗದಂತೆ ಬೇಗನೆ ದುರಸ್ಥಿಗೊಳಿಸಲು ಸಂಬಂಧಪಟ್ಟ ಇಲಾಖೆಗೆ ನಿರ್ದೇಶನ ನೀಡಿದರು.

Scanned with OKEN Scanner

3. ಗಾಯಿತ್ರಿ ಉದ್ಯಾನವನದ ಎದಿರು ಹೊಸದಾಗಿ ಡಾಂಬರೀಕರಿಸಿರುವ ರಸ್ತೆಯಲ್ಲಿ ಬೆಸ್ಕಾಂ ರವರು ಗುಂಡಿಗಳನ್ನು ಅಗೆದಿದ್ದಾರೆ. ಸಾರ್ವಜನಿಕರು ಸಭೆಗೆ ತಿಳಿಸಿದಾಗ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಇಲಾಖೆಯವರಿಗೆ ಸೂಕ್ತ ಕ್ರಮವಹಿಸಲು ನಿರ್ದೇಶನ ನೀಡಿದರು.
4. ವಾರ್ಡ್ ವ್ಯಾಪಿಯಲ್ಲಿ ಬರುವ 3ನೇ ಅಡ್ಡರಸ್ತೆಯಲ್ಲಿ ವಾಹನಗಳ ಕಳ್ಳತನ ಹೆಚ್ಚಾಗಿರುತ್ತದೆ ಹಾಗೂ ಪೆಟ್ರೋಲ್ ಕದಿಯುವವರ ಸಂಖ್ಯೆ ಹೆಚ್ಚಾಗಿರುತ್ತದೆ ಎಂದು ಸಾರ್ವಜನಿಕರು ಸಭೆಗೆ ತಿಳಿಸಿದಾಗ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಪೋಲಿಸ್ ಇಲಾಖೆಯವರಿಗೆ ಸೂಕ್ತ ಕ್ರಮವಹಿಸಲು ನಿರ್ದೇಶನ ನೀಡಿದರು.
5. ವಾರ್ಡ್ ವ್ಯಾಪಿಯಲ್ಲಿ ಸೊಳ್ಳೆಗಳು ಹೆಚ್ಚಾಗಿದ್ದು ಫಾಗಿಂಗ್ ಅವಶ್ಯಕತೆ ಇರುವುದರಿಂದ ಫಾಗಿಂಗ್ ಮಾಡಲು ಸಾರ್ವಜನಿಕರು ಸಭೆಗೆ ತಿಳಿಸಿದಾಗ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಆರೋಗ್ಯ ಇಲಾಖೆಯವರಿಗೆ ಸೂಕ್ತ ಕ್ರಮವಹಿಸಲು ನಿರ್ದೇಶನ ನೀಡಿದರು.
6. ವಾರ್ಡ್ ವ್ಯಾಪಿಯಲ್ಲಿ ಬರುವ ಸಿಸಿಕ್ಯಾಮರಗಳ ಬಗ್ಗೆ ಮಾಹಿತಿ ಕೋರಿ ಚರ್ಚಿಸಿದರು.
7. ವಾರ್ಡ್ ವ್ಯಾಪಿಯಲ್ಲಿ ಬರುವ 5ನೇ ಅಡ್ಡರಸ್ತೆ ಆರ್.ಟಿ.ಓ ಸಿಗ್ನಲ್ ಎದುರು ರಸ್ತೆಯಲ್ಲಿ ನೀರಿನ ಪೈಪು ತುಂಬ ಹಳೆಯದಾಗಿದ್ದು ಆ ರಸ್ತೆಯನ್ನು ಡಾಂಬರೀಕರಿಸಲು ಯೋಜನೆ ಇರುತ್ತದೆ. ಡಾಂಬರೀಕರಿಸುವ ಮುಂಚೆ ನೀರಿನ ಪೈಪ್‌ನ್ನು ಹೊಸದಾಗಿ ಅಳವಡಿಸಿಕೊಡಲು ಸಾರ್ವಜನಿಕರು ಸಭೆಗೆ ತಿಳಿಸಿದರು. ಸಭೆಯಲ್ಲಿದ್ದ BWSSB ಯವರೊಂದಿಗೆ ಚರ್ಚಿಸಿದಾಗ ಅಧಿಕಾರಿಯವರು ಆ ರಸ್ತೆಯಲ್ಲಿ ಹೊಸದಾಗಿ ಅಳವಡಿಸಲು ಸಧ್ಯಕ್ಕೆ ಯಾವುದೇ ಯೋಜನೆ ಇರುವುದಿಲ್ಲ. ಆದ ಕಾರಣ ಮುಂದಿನ ದಿನಗಳಲ್ಲಿ ಯೋಜನೆ ಮಾಡುತ್ತೇವೆಂದು ತಿಳಿಸಿದರು.
8. ವಾರ್ಡ್ ವ್ಯಾಪ್ತಿಯಲ್ಲಿ ಒಂದು ಹೊಸದಾದ ಪಬ್ಲಿಕ್ ಜಿಮ್ ಅವಶ್ಯಕತೆ ಇದೆ ಎಂದು ಸಾರ್ವಜನಿಕರು ಸಭೆಗೆ ತಿಳಿಸಿ ನೋಡಲ್ ಅಧಿಕಾರಿಗಳೊಂದಿಗೆ ಚರ್ಚಿಸಿದರು.
9. ವಾರ್ಡ್ ವ್ಯಾಪ್ತಿಯಲ್ಲಿ ಮಳೆ ನೀರಿನ ಸಂಸ್ಕರಣ ಘಟಕಗಳ ಅವಶ್ಯಕತೆ ಇದೆ ಎಂದು ಸಾರ್ವಜನಿಕರು ಸಭೆಗೆ ತಿಳಿಸಿ ನೋಡಲ್ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಮುಂದುವರೆದಂತೆ, ನೋಡಲ್ ಅಧಿಕಾರಿಗಳ ಅನುಮತಿ ಮೇರೆಗೆ ಸದಸ್ಯ ಕಾರ್ಯದರ್ಶಿಗಳಾದ ಹಾಗೂ ಸಹಾಯಕ ಇಂಜಿನಿಯರ್ ಆದ ಕುಮಾರಿ|| ಹಿತೈಷಿಣಿ.ಎಸ್ ಸಹಾಯಕ ಅಭಿಯಂತರರು ರವರು ಎಲ್ಲಾರಿಗೂ ವಂದಿಸಿ ಸಭೆ ಮುಕ್ತಾಯಗೊಳಿಸಿದರು.

**ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ ಆದೇಶದ ಮೇರೆಗೆ,**

**ಕಾರ್ಯದರ್ಶಿ**
**ವಾರ್ಡ್ ಸಂ.140**

**ನೋಡಲ್ ಅಧಿಕಾರಿ**
**ವಾರ್ಡ್ ಸಂ.140**